OS No.184/2015 DW.1

ಅಸಲು ದಾವೆ ಸಂಖ್ಯೆ - 184/2015
ಡಿ.ಡಬ್ಲ್ಯೂ - 01
ದಿನಾಂಕಃ 17-12-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ. ಸಿ ಬಿ ಪಿ ವಕೀಲರಿಂದ**

ದಾವಾ ಆಸ್ತಿಗೆ ಹೊಂದಿಕೊಂಡು ನಿಮ್ಮ ಬಾಡಿಗೆ ಮನೆಗಳು (ಲೋಹಾರ ಚಾಳ) ಇವೆ ಎಂದರೆ ಸರಿ. ಲೋಹಾರ ಚಾಳವನ್ನು ನೀವು ಯಾರಿಂದ ಖರೀದಿ ಮಾಡಿದ್ದೀರಿ ಎಂದರೆ ಚನ್ನ ಬಸವೇಶ್ವರ ಕಲ್ಮಠ ರವರಿಂದ ಖರೀದಿಸಿದ್ದೇವೆ. ನಿಮ್ಮ ಬಾಡಿಗೆ ಮನೆಗಳು ಸರ್ವೆ ನಂ. 59 ರಲ್ಲಿ ಇವೆ ಎಂದರೆ ಸರಿ. ಸದರಿ ಸರ್ವೆ ನಂ 59 ನಿಮಗೆ ಹೇಗೆ ಬಂದಿತು ಎಂದರೆ ಅದರಲ್ಲಿ ಹಲವಾರು ಆಸ್ತಿಗಳು ಇವೆ, ಅದರಲ್ಲಿ ಟಿ ಎಂ ಸಿ ಆಸ್ತಿಗಳನ್ನು ನಾವು ಖರೀದಿ ಮಾಡಿರುತ್ತೇವೆ. ಸರ್ವೆ ನಂ 59 ರಲ್ಲಿ ಒಟ್ಟು ಎಷ್ಟು ಆಸ್ತಿಗಳು ಇವೆ ಎಂದರೆ ನನ್ನ ಆಸ್ತಿಗೆ ಸಂಬಂಧಪಟ್ಟಂತೆ ಮಾತ್ರ ಮಾಹಿತಿ ಗೊತ್ತು ಉಳಿದ ಮಾಹಿತಿ ನನಗೆ ಗೊತ್ತಿಲ್ಲ. ನಿಮ್ಮ ಆಸ್ತಿಯ ನಂಬರ ಹೇಳಲು ಆಗುತ್ತದೆಯಾ ಎಂದರೆ 546/2 ಇರುತ್ತದೆ. ಆಸ್ತಿ ನಂ. 546/2 ರ ಹೊಂದಿಕೊಂಡು ಪೂರ್ವಕ್ಕೆ ಯಾರ ಆಸ್ತಿ ಇದೆ ಎಂದರೆ ನಮ್ಮದೇ ಆಸ್ತಿ ಇದೆ. ಸರ್ವೆ ನಂ 59 ರ ಪಶ್ಚಿಮಕ್ಕೆ ವಾದಿಯ ಆಸ್ತಿ ಇದೆ ಎಂದರೆ ಸರಿಯಲ್ಲ. ಅದು ಸರ್ಕಾರಕ್ಕೆ ಸೇರಿದ ಆಸ್ತಿ. ಸರ್ವೆ ನಂ 59 ರಲ್ಲಿರುವ ನಿಮ್ಮ ಚಾಳವನ್ನು ಸರ್ಕಾರದವರು ನಿಮ್ಮ ತಂದೆಗೆ ಮಂಜೂರ ಮಾಡಿದ್ದರು ಎಂದರೆ ಸರಿಯಲ್ಲ. ಅದೇ ಪ್ರಕಾರ ವಾದಿಗೆ 1994-95 ರಲ್ಲಿ ಪೂರ್ವ -ಪಶ್ಚಿಮ 115 ಅಡಿ ಉತ್ತರ ದಕ್ಷಿಣ 110 ಅಡಿವುಳ್ಳ ಆಸ್ತಿಯು ಸರಕಾರದವರು ಮಂಜೂರ ಮಾಡಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಮುಂದುವರೆದು ಅದನ್ನು ಈಗ ಉಪ ವಿಭಾಗಾಧಿಕಾರಿಗಳು ರದ್ದು ಮಾಡಿರುತ್ತಾರೆ. ವಾದಿಯು ಡಿ ಸಿ ಮತ್ತು ಎ ಸಿ ರವರ ವಿರುದ್ಧ ಅಸಲು ದಾವಾ ಸಂಖ್ಯೆ 153/2009 ನ್ನು ಹೂಡಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಅದೇ ಪ್ರಕಾರ ವಾದಿಯ ವಹಿವಾಟಿಗೆ ಹರಕತ್ತು ಮಾಡಬಾರದಂತೆ ದಿಃ 19-10-2010 ರಂದು ಇದೇ ನ್ಯಾಯಾಲಯದವರು ಆದೇಶ ಹೊರಡಿಸಿರುತ್ತಾರೆ ಎಂದರೆ ಸರಿಯಲ್ಲ. ಅದು ಸರಕಾರದ ಆಸ್ತಿ ಇರುತ್ತದೆ. ಅದೇ ರೀತಿ ಟಿ ಎಮ್ ಸಿ ಸವಣೂರ ರವರು ಹರಕತ್ತು ಮಾಡಿದಕ್ಕೆ ವಾದಿಯು ಅಸಲು ದಾವಾ ಸಂಖ್ಯೆ 86/2012 ನ್ನು ಹೂಡಿದ್ದರು ಎಂದರೆ, ಹೂಡಿದ್ದರು ಆದರೆ ಅದು ನನಗೆ ಅನ್ವಯಿಸುವುದಿಲ್ಲ. ಅದೇ ಪ್ರಕಾರ ವಾದಿಯ ವಹಿವಾಟಿಗೆ ಹರಕತ್ತು ಮಾಡಬಾರದಂತೆ ನ್ಯಾಯಾಲಯದವರು ಆದೇಶ ಹೊರಡಿಸಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಆದರೆ ಉಪವಿಭಾಗಾಧಿಕಾರಿಗಳು ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಒಂದು ಆದೇಶವನ್ನು ಹೊರಡಿಸಿದ್ದು

ಅದನ್ನು ರದ್ದುಪಡಿಸಿರುತ್ತಾರೆ. ಅದೇ ರೀತಿ ಟಿ ಎಮ್ ಸಿ ಸವಣೂರ ರವರು ಸದರಿ ಆದೇಶವನ್ನು ಪ್ರಶ್ನಿಸಿ ಮೇಲ್ಮಮನವಿ ಸಲ್ಲಿಸಿರುತ್ತಾರೆ ಎಂದರೆ ಅದು ನನಗೆ ಅನ್ವಯಿಸುವುದಿಲ್ಲ. ಅವರ ಮೇಲ್ಮಮನವಿ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಈ ಎಲ್ಲಾ ಪ್ರಕರಣಗಳಲ್ಲಿ ನ್ಯಾಯಾಲಯವು ದಾಖಲೆಗಳನ್ನು ಪರಿಶೀಲಿಸಿ ವಾದಿಯೇ ಕಬ್ಜಾದಲ್ಲಿ ಇದ್ದಾರೆ ಎಂದು ಆದೇಶ ಮಾಡಿರುತ್ತಾರೆ ಎಂದರೆ ಅಲ್ಲಿ ವಾದಿಯು ಕಬ್ಜಾದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ- 1 ನ್ನು ತೋರಿಸಿದ್ದು ಆ ಆಸ್ತಿಯು ವಾದಿಗೆ ಮಂಜೂರು ಆಗಿರುತ್ತದೆ ಎಂದರೆ ಅದು ನನಗೆ ಗೊತ್ತಿರುವುದಿಲ್ಲ. ನಮಗೆ ಬೇರೆ ಆಸ್ತಿಯಲ್ಲಿ ಸರಕಾರದವರು ನಮ್ಮ ತಂದೆಗೆ ಮಂಜೂರ ಮಾಡಿರುತ್ತಾರೆ. ಮುಂದುವರೆದು ನಿಪಿ- 1 ನ್ನು ರದ್ದು ಪಡಿಸಿರುತ್ತಾರೆ. ನಿಮ್ಮ ತಂದೆಗೆ ಮಂಜೂರಾದ ಆಸ್ತಿಯ ಸಂಖ್ಯೆ ಎಷ್ಟು ಎಂದರೆ ಅಂದಾಜು ಪ್ಲಾಟ ನಂ. 264 ಇರಬಹುದು. ನಿಪಿ- 1 ರಲ್ಲಿ ನಮೂದಿಸಿರುವ ಚಕ್ಕಬಂದಿಯನ್ನು ಸಾಕ್ಷಿಗೆ ಓದಿ ತೋರಿಸಿದ್ದು ಅದನ್ನು ಸಾಕ್ಷಿಯು ಪರಿಶೀಲಿಸಿ ಈ ಚಕ್ಕಬಂದಿ ಇರಬಹುದು ಆದರೆ ಆಸ್ತಿಯು ಸರಕಾರಕ್ಕೆ ಸಂಬಂಧಪಟ್ಟಿರುತ್ತದೆ. ಸಾಕ್ಷಿಗೆ ನಿಪಿ- 2 ನ್ನು ತೋರಿಸಿದ್ದು ಅದರಲ್ಲಿ ವಾದಿಯ ಹೆಸರು ಇದೆ ಎಂದರೆ ಇರಬಹುದು ಆದರೆ ಅಲ್ಲಿ ಯಾವುದೇ ಜಾಗ ಇರುವುದಿಲ್ಲ. ಸಾಕ್ಷಿಗೆ ನಿಪಿ- 3 ನ್ನು ತೋರಿಸಿದ್ದು ಅದನ್ನು ವಾದಿಯು ಕಂದಾಯ ತುಂಬಿದ್ದಾರೆ ಎಂದು ಇರುತ್ತದೆ ಎಂದರೆ ಸರಿ. ಆದರೆ ಅದೆಲ್ಲವನ್ನು ಮಾನ್ಯ ಉಪವಿಭಾಗಾಧಿಕಾರಿಗಳು ರದ್ದು ಪಡಿಸಿರುತ್ತಾರೆ.

ನಿಮ್ಮ ಚಾಳಕ್ಕೆ ಹೊಂದಿಕೊಂಡು ದಕ್ಷಿಣ ದಿಕ್ಕಿಗೆ ಒಂದು ಕಂದಕ ಇದೆ ಎಂದರೆ ಸರಿ. ಉತ್ತರಕ್ಕೆ ಪಾಳಾ ಬಾದಾಮಿ ರಸ್ತೆ ಇದೆ ಎಂದರ ಸರಿ. ಪಶ್ಚಿಮಕ್ಕೆ ವಾದಿಯ ಆಸ್ತಿ ಇದೆ ಎಂದರೆ ಅದು ಸರ್ಕಾರದ ಆಸ್ತಿ. ಮೂಲತಃ ನೀವು ಖರೀದಿಸಿದ ಆಸ್ತಿಯು ನಿಮಗೆ ಮಾರಾಟ ಮಾಡಿದ ಚನ್ನಬಸವಸ್ವಾಮಿ ರೇವಣಸಿದ್ದಯ್ಯ ಕಲ್ಮಠ ರವರಿಗೆ ಹೇಗೆ ಬಂದಿತು ಎಂದು ಪರಿಶೀಲನೆ ಮಾಡಿದ್ದೀರಾ ಎಂದರೆ ಎಲ್ಲವೂ ಟಿ ಎಮ್ ಸಿ ಆಸ್ತಿ ಇರುತ್ತದೆ ಮತ್ತು ಎಲ್ಲವೂ ಅವರ ಹೆಸರಿನಲ್ಲಿ ಇತ್ತು. ಸದರಿ ಆಸ್ತಿಗಳು ಅವರಿಗೆ ಹೇಗೆ ಬಂದವು ಎಂದು ಏನಾದರೂ ದಾಖಲೆ ನೋಡಿದ್ದೀರಾ ಎಂದರೆ ಅವರು ಉತಾರವನ್ನು ತೋರಿಸಿದ್ದೀರು. ಅದರ ಚಕ್ಕಬಂದಿ ಹೇಳಲು ಆಗುತ್ತದೆಯಾ ಎಂದರೆ ಪಶ್ಚಿಮಕ್ಕೆಃ ಸರ್ಕಾರಿ ರಸ್ತೆ, ಪೂರ್ವಕ್ಕೆ ನಮ್ಮದೇ ಆಸ್ತಿ, ಉತ್ತರಕ್ಕೆ ಪಾಳಾಬಾದಾಮಿ ರಸ್ಸೆ, ದಕ್ಷಿಣಕ್ಕೆ ಕಂದಕ. ನೀವು ಯಾರಿಂದ ಖರೀದಿ ಹಿಡಿದ್ದಿದ್ದೀರಿ ಅವರ ವಿಚಾರಣೆ ಮಾಡಿಸುತ್ತೀರಾ ಎಂದರೆ ಮಾಡಿಸಬೇಕೆಂದರೆ ಮಾಡಿಸುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ**

**ಮುಂದೂಡಲಾಯಿತು.**

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.